ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ

೬೨೩ - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ನಗರಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಕೊಳಚೆ ನೀರು ನಾಲೆಗಳಿಗೆ ಬಂದು ಸೇರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರಿಂದಾಗಿ ಜನರ ಆರೋಗ್ಯ ಕೆಟ್ಟುತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್, ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು).

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ಸರ್ಕಾರವು ಪುರಸಭೆ ಬನ್ನೂರು ಇವರಿಗೆ ನಾಲೆ ನೀರನ್ನೂ ಶುಚಿಯಾಗಿಡಲು ಮತ್ತು ಜನರ ಆರೋಗ್ಯವನ್ನು ಕೆಡದಂತೆ ನೋಡಿಕೊಳ್ಳಲು ನಿರ್ದೇಶನ ನೀಡಲಾಗುವುದು.

ಇ) ಸಧ್ಯಕ್ಕೆ ಇಲ್ಲ.

ಕೊಳಚೆ ನಿರ್ಮೂಲನ ಮಂಡಲಿಯ ಠೇವಣಿಯನ್ನು ಬ್ಯಾಂಕುಗಳಲ್ಲಿ ಇಟ್ಟಿರುವುದು.

೧೫೯೮ - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್ ಕ್ಷೇತ್ರ). ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ನಿಗದಿತ ಕಾಲಕ್ಕೆ ಠೇವಣಿಯಲ್ಲಿ ಹಣ ತೊಡಗಿಸಿದೆಯೇ?

೨) ಹಾಗಿದ್ದಲ್ಲಿ ಯಾವ ಯಾವ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಹಣವನ್ನು ಠೇವಣಿಯಲ್ಲಿ ಇಡಲಾಗಿದೆ. (ಠೇವಣಿ ಹಣದ ಬಗ್ಗೆ ವಿವರ ನೀಡುವುದು).

೩) ಈ ರೀತಿ ಮಂಡಳಿಯ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಲ್ಲಿಡಲು ಕಾರಣಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು).

೧) ಹೌದು, ಸದ್ಯ ಕೇವಲ ಒಂದು ಪ್ರಕರಣದಲ್ಲಿ ಕೇವಲ ೪೬ ದಿನಗಳ ಅವಧಿಗೆ ಮಾತ್ರ ಬ್ಯಾಂಕಿನಲ್ಲಿ ಠೇವಣಿಯಲ್ಲಿ ತೊಡಗಿಸಲಾಗಿದೆ.

೨) ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಬೆಂಗಳೂರು, ಶ್ರೀನಗರ ಶಾಖೆಯಲ್ಲಿ ೪೬ ದಿನಗಳ ಅವಧಿಗೆ ೪೩.೦೦ ಲಕ್ಷ ರೂಗಳನ್ನು ನಿಗದಿತ ಠೇವಣಿಯಲ್ಲಿ ತೊಡಗಿಸಲಾಗಿದೆ.

೩) ಸದರಿ ರೂ. ೪೩.೦೦ ಲಕ್ಷಗಳು ಸರ್ಕಾರದಿಂದ ಅಥವಾ ಹುಡ್ಕೋ ಸಂಸ್ಥೆ ನೆರವಿನಿಂದಾಗಲೀ ಬಿಡುಗಡೆಯಾದ ಹಣವಾಗಿರುವುದಿಲ್ಲ. ಇದು ವಾಣಿಜ್ಯ ಇಲಾಖೆಯಿಂದ ಮಂಡಳಿಯ ಯೋಜಿತ ವಾಣಿಜ್ಯ ಸಂಕೀರ್ಣದ ಬಾಡಿಗೆಯ ಬಗ್ಗೆ ನೀಡಲಾದ ಮುಂಗಡ ಹಣವಾದುದರಿಂದ ಬ್ಯಾಂಕಿನಲ್ಲಿಡಲಾಗಿದೆ.

REPAIRS TO TEMPLES OF BELUR TALUK.

628- Sri H. K.Kumara Swamy (Belur) will the Hon'ble Minister of State for Women and Child Development, Kannada and Cluture Department. we pleased to state?

a) *Is the Government aware of dilapidated conditions of temples of Belur Taluk under the Jurisdication of Archaeology Department?*

b) *If so, what actions have been taken up by the Government for their reparis?*

Smt. B.T. LALITHANAYAK (Minister of State for Women and Child Development and Kannada and Culture Department.

a) Yes.

b) The Veerabhadra Temple of Halebid, Chatteswara Temple, Chattchattanahalli of Belur Taluk are declared as State Protected Monuments. Some portions of these temples have been conserved far. Conservation of these temples will be taken up in due course depending upon the budgetary grants.

ಸುರತ್ಕಲ್ ಕ್ಷೇತ್ರದಲ್ಲಿ ಕೈಗಾರಿಕೆಗಳಿಂದುಂಟಾಗುತ್ತಿರುವ ಪರಿಸರ ಮಾಲಿನ್ಯದ ತಡೆಗೆ ಕ್ರಮ.

೬೩೪-ಶ್ರೀ ಕುಂಬ್ಳೆ ಸುಂದರ್ ರಾವ್(ಸುರತ್ಕಲ್) ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಸುರತ್ಕಲ್ ಕ್ಷೇತ್ರದಲ್ಲಿ ಪರಿಸರ ನಿಯಂತ್ರಣ ಮಂಡಳಿಯವರು ಪರವಾನಿಗೆ ನೀಡಿದ ಕೈಗಾರಿಕೆಗಳು ಎಷ್ಟು?*

ಆ) *ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಮಂಡಳಿಯ ನಿಯಮಾನುಸಾರ ಎಲ್ಲಾ ಕ್ರಮಗಳನ್ನು ಅವುಗಳಲ್ಲಿ ಅಳವಡಿಸಲಾಗಿದೆಯೇ?*